# ಹೊಸ ತಲೆಮಾರಿನ ತಲ್ಲಣವೂ ಇದೆ

ಜಗದೀಶ ಜಾಲ
ಸಿರಿ ಕನ್ನಡ
'ಮತ್ತೆ ಮಾಯಾಮೃಗ'
ರಾಮಚಂದ್ರಪ್ಪ



◆ 'ಮತ್ತೆ ಮಾಯಾಮೃಗ'ದಲ್ಲಿ ಮತ್ತೆ ಕಾಣಿಸಿಕೊಳ್ಳುತ್ತಿದ್ದೀರಿ. ಏನೀ ವಿಶೇಷ?

ನಿರ್ದೇಶಕ ನಾಗೇಂದ್ರ ಶಾ ಅವರ ಜೊತೆ ಸುಮಾರು 20 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಅವರ ಜೊತೆ ಸಹನಿರ್ದೇಶಕನಾಗಿ, ಸಂಚಿಕೆ ನಿರ್ದೇಶಕನಾಗಿ ನಾಲ್ಕು ಧಾರಾವಾಹಿಗಳಲ್ಲಿ ಕೆಲಸ ಮಾಡಿದ್ದೇನೆ. ಮಾತ್ರವಲ್ಲದೆ ರಂಗಭೂಮಿಯಲ್ಲಿಯೂ ಅವರ ನನ್ನ ಒಡನಾಟವಿದೆ. ಅವರು ಈ ಅವಕಾಶವನ್ನು ಕೊಟ್ಟಿದ್ದರಿಂದ ಮಾಡುತ್ತಿದ್ದೇನೆ.

◆ ಹೊಸದಾಗಿ ಈ ತಂಡ ಸೇರಿದ್ದೀರಿ, ತೊಡಕಾಗುವುದಿಲ್ಲವೇ?

ಹಳೆಯದರಲ್ಲಿ ನಾನು ನಟಿಸಿರಲಿಲ್ಲ ನಿಜ. ಆ ಸಮಯದಲ್ಲಿ ನನಗೂ ಕರೆದಿದ್ದರು. ನಾನು ಬೇರೆ ಕೆಲಸದಲ್ಲಿ ತೊಡಗಿದ್ದರಿಂದ ಆಗಿರಲಿಲ್ಲ. ಈಗ ಮಾಡುತ್ತಿದ್ದೇನೆ. ನನ್ನ ಪಾತ್ರ ಬರುವ ಟ್ರ್ಯಾಕ್‌ನಲ್ಲಿ ಮಂಜುಭಾಷಿಣಿ ಒಬ್ಬರೇ 'ಮಾಯಾಮೃಗ'ದಲ್ಲಿ ನಟಿಸಿದ್ದರು. ಉಳಿದವರೆಲ್ಲ ಹೊಸಬರು. ಹಿಂದಿನ ಟ್ರ್ಯಾಕ್‌ನಲ್ಲಿಯೇ ಕಥೆ ಮುಂದುವರಿಸಿದ್ದಾರೆ. ಕಾಲಕ್ಕೆ ತಕ್ಕಂತೆ ಒಂದಿಷ್ಟು ಬದಲಾವಣೆಯೂ ಬೇಕಾಗುತ್ತದೆ. ಈ ತಲೆಮಾರಿನ ತಲ್ಲಣಗಳಿಗೂ ಪ್ರತಿಸ್ಪಂದಿಸುತ್ತಿದೆ ಎಂದು ನನಗನಿಸುತ್ತದೆ. ಈ ಕಥೆ ಇನ್ನೂ ದೊಡ್ಡಪ್ರಮಾಣದ ವೀಕ್ಷಕರನ್ನು ತಲುಪುತ್ತಿದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಟಿ.ಎನ್. ಸೀತಾರಾಂ ಅವರ ವೀಕ್ಷಕ ವಲಯ ದೊಡ್ಡದಿದೆ. ನನಗೆ ಕೊಟ್ಟಿರುವ ಪಾತ್ರ ನನಗೆ ಮುಖ್ಯ. ಅದನ್ನು ಚೆನ್ನಾಗಿ ನಿರ್ವಹಿಸುತ್ತಿದ್ದೇನೆ. ಇಲ್ಲಿ ಊರ ಗೌಡರ ಪರಮಾಪ್ತ ಸ್ನೇಹಿತನಾಗಿದ್ದೇನೆ. ಅವರ ಮಗ ಅಮೆರಿಕದಲ್ಲಿ ಇದ್ದಾನೆ. ಅವನಿಗೆ ಹಣದ ಮೋಹ. ಗೌಡರಿಗೆ ಹಳ್ಳಿಯ ಪ್ರೀತಿ. ಆ ಊರಿಗೆ ಬಿಂದು ಶಿಕ್ಷಕಿಯಾಗಿ ಬಂದಿದ್ದಾರೆ. ಅವರ ಮಗಳ ಉನ್ನತ ಶಿಕ್ಷಣಕ್ಕೆ ಗೌಡರು ಸಹಾಯ ಮಾಡುತ್ತಾರೆ ಹೀಗೆ ಕಥೆ ಮುಂದುವರಿಯುತ್ತದೆ.

◆ ತೆರೆಮರೆಯ ಆಪ್ತತೆ ನಿಮಗೆ ಇಲ್ಲಿ ಸಿಗುತ್ತಾ?

ಆ ವಿಷಯದಲ್ಲಿ ನಾನು ತುಂಬ ಚ್ಯೂಸಿಯಾಗಿದ್ದೇನೆ. ಅನೇಕರು ನಟನೆಗೆ ಕರೆದಾಗಲೂ ಆಗಲ್ಲ ಎಂದೇ ಹೇಳಿದ್ದೇನೆ. ನನಗೆ ಸಮಯ ನೀಡಲು ಆಗುವುದಿಲ್ಲ ಎಂದೇ ನೇರವಾಗಿ ಹೇಳುತ್ತೇನೆ. ಇದು ಬೇರೆಯವರಿಗೆ ಕೊಬ್ಬು ಅನ್ನಿಸಬಹುದು. ಅದು ನನ್ನ ಸಂಕಷ್ಟ. ನನಗೆ ಬೇರೆ ಕೆಲಸಗಳು ಇರುವುದರಿಂದ ಸಾಧ್ಯ ಆಗುವುದಿಲ್ಲ. ಅದರ ಜೊತೆ ರಂಗಭೂಮಿ– ತಿರುಗಾಟ ಕೂಡ ಇರುತ್ತದೆ. ಈಗ ತೆರೆಯ ಹಿಂದೆ ಕೆಲಸ ಮಾಡಲು ಸಮಯ ಇಲ್ಲ. ಏಕೆಂದರೆ ನಿತ್ಯವೂ ಬೆಳಿಗ್ಗೆಯಿಂದ ರಾತ್ರಿಯ ತನಕ ತಿಂಗಳಿಡೀ ಕೆಲಸ ಮಾಡಬೇಕಾಗುತ್ತದೆ. ಪಾತ್ರ ಆದರೆ ತಿಂಗಳಲ್ಲಿ ಕೆಲವು ದಿನ ಬಂದರೂ ಆಗುತ್ತದೆ. ಅದು ನಮ್ಮ ಪಾತ್ರದ ಅಗತ್ಯದ ಮೇಲೆ ನಿರ್ಧಾರ ಆಗುತ್ತದೆ.

◆ 'ಮತ್ತೆ ಮಾಯಾಮೃಗ' ಕಥೆ ಹೇಗಿದೆ?

ಹಳೆಯ ಟ್ರ್ಯಾಕ್ ಇಟ್ಟುಕೊಂಡು ಮುಂದುವರಿಸಿದ್ದಾರೆ. ಕಾಲಾನುಕ್ರಮದಲ್ಲಿ ಜನರಲ್ಲಿಯೂ ಸಾಕಷ್ಟು ಪರಿವರ್ತನೆ ಆಗಿರುತ್ತದೆ. ಹೀಗಿರುವಾಗ ಇದು ಅವರಿಗೆ ಹೇಗೆ ತಲುಪುತ್ತದೆ ಎನ್ನುವುದನ್ನು ತಿಳಿಯುವ ಕುತೂಹಲ ನನಗೂ ಇದೆ. ಬೇರೆ ತಳಕು ಬಳಕು ಇಲ್ಲ. ಭಾವನಾತ್ಮಕ ನೆಲೆಯಲ್ಲಿಯೇ ಕಥೆ ಸಾಗುತ್ತಿದೆ. ಮಧ್ಯಮ ವರ್ಗ ಜನಜೀವನಕ್ಕೆ ಸಂಬಂಧಿಸಿದೆ. ಹಾಗಾಗಿ ಅವರಿಗೆ ಆಪ್ತವಾಗಬಹುದು. ಇಲ್ಲಿ ಫ್ಯಾಂಟಸಿಗಿಂತ ವಾಸ್ತವಿಕತೆಗೆ ಪ್ರಾಶಸ್ತ್ಯ ನೀಡಿದ್ದಾರೆ.

◆ ರಂಗಭೂಮಿ ಒಲವಿನ ನೀವು ಇಲ್ಲಿ ಪ್ರೇಕ್ಷಕನ ನಿಲುವು ಹೇಗೆ ಗ್ರಹಿಸುತ್ತೀರಿ?

ನಾಟಕ ನನ್ನ ಅಭಿರುಚಿ. ಈಗಲೂ ಒಲವು ಅಲ್ಲೇ ಇದೆ. ಮೊದಲ ಆದ್ಯತೆ ರಂಗಭೂಮಿಗೇ ಮೀಸಲು. ಸಾಮಾಜಿಕ ಮಾಧ್ಯಮಗಳಲ್ಲಿ ಇದಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಗುತ್ತದೆ. ಅದನ್ನು ಗ್ರಹಿಸಲು ಅದರದ್ದೇ ಆದ ನೆಟ್‌ವರ್ಕ್ ಇದೆ. ನಾಟಕದಲ್ಲಿ ಪ್ರತ್ಯಕ್ಷವಾಗಿಯೇ ಕಾಣುತ್ತೇವೆ. ನನ್ನ ಅಭಿನಯವೂ ನೈಜವಾಗಿಯೇ ಇದೆ. ನಿಮ್ಮ ಜೊತೆ ಮಾತನಾಡಿದಂತೆಯೇ ನಟನೆಯಲ್ಲಿಯೂ ಸಹಜವಾಗಿರುತ್ತದೆ. ಕೆಲವರು ರಂಗಭೂಮಿ ಕಲಾವಿದರು ಅಂದರೆ ಓವರ್ ಆ್ಯಕ್ಟ್ ಮಾಡುತ್ತಾರೆ ಎಂದು ದೂರುವುದು ಇದೆ. ಅದು ಏನೇ ಇದ್ದರೂ ಅಭಿನಯವನ್ನು ಮಾಡಿಸುವವರ ಮೇಲೆ ನಿಂತಿರುತ್ತದೆ. ನನಗೆ ಪ್ರೇಕ್ಷಕರಿಂದ ನೈಜವಾಗಿದೆ ಎಂಬ ಅಭಿಪ್ರಾಯ ಸಿಕ್ಕಿದೆ.

◆ ಕಿರುತೆರೆ–ಸಿನಿಮಾವನ್ನು ಏಕೆ ವೃತ್ತಿಯಾಗಿ ತೆಗೆದುಕೊಂಡಿಲ್ಲ?

ಎರಡು ದಶಕಗಳ ಕಾಲ ಬೇರೆ ಬೇರೆ ಕ್ಷೇತ್ರದಲ್ಲಿ ತೊಡಗಿದ್ದೇನೆ. ಈಗ ವೃತ್ತಿಯಾಗಿ ತೆಗೆದುಕೊಳ್ಳುವ ವಯಸ್ಸು ಅಲ್ಲ ಎನ್ನುವುದು ನನ್ನ ಅಭಿಪ್ರಾಯ. ಯಾವುದೇ ಒಂದು ಕ್ಷೇತ್ರದಲ್ಲಿ ಹೋರಾಡಿ ಮುನ್ನುಗ್ಗುತ್ತೇನೆ ಎನ್ನುವುದಾದರೆ ವಯಸ್ಸು–ಜವಾಬ್ದಾರಿ ಬೇಕಾಗುತ್ತದೆ. ಸದ್ಯ ಕುಟುಂಬ, ಉದ್ಯಮ ನೋಡಬೇಕಾಗಿದೆ. ಒಂದನ್ನೇ ವೃತ್ತಿಯಾಗಿ ತೆಗೆದುಕೊಳ್ಳಲು ಆ ಜವಾಬ್ದಾರಿಗಳು ಬೆಂಬಲಿಸುವುದಿಲ್ಲ. ಆತ್ಮೀಯರು ಕರೆದರೆ, ಅದು ನನ್ನ ಅಭಿರುಚಿಗೆ ಹೊಂದುವಂತಿದ್ದರೆ ಸಮಯವನ್ನು ತೂಗಿಸಿಕೊಂಡು ಕೆಲಸ ಮಾಡುತ್ತೇನೆ.

■ ರಾಘವೇಂದ್ರ ಕೆ.